**ಓಎಸ್ ನಂಃ 235/2019 ಡಿ.ಡಬ್ಲ್ಯೂ- 1**

**ದಿನಾಂಕಃ 05.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ವಾದಿಯ ಪರ ಶ್ರೀ ಸಿ.ಎಸ್.ಕೆ. ವಕೀಲರಿಂದಃ</u>

ನೀವು ಕೊಟ್ಟಿರುವ ದಾಖಲಾತಿ ಹೇಗೆ ಬಂದಿರುತ್ತದೆ ಎಂದರೆ ನನ್ನ ಅತ್ತೆಯ ಹೆಸರಿನಲ್ಲಿ ಇರುತ್ತದೆ. ನಿಮ್ಮ ಅತ್ತೆಗೆ ಸದರಿ ಆಸ್ತಿ ಹೇಗೆ ಬಂತು ಎಂದರೆ ನನ್ನ ಮಾವ ತೀರಿಕೊಂಡ ನಂತರ ಬಂದಿರುತ್ತದೆ, ನಿಮ್ಮ ಮಾವನಿಗೆ ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮಾವನ ಹೆಸರು ಏನು ಎಂದರೆ ರಾಮಯ್ಯ ಎನ್ನುತ್ತಾರೆ. ನಿಮ್ಮ ಮಾವನವರು ಯಾವ ವರ್ಷದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಅವರು ತೀರಿಕೊಂಡ ನಂತರವೇ ನನ್ನ ಮದುವೆ ಆಗಿರುತ್ತದೆ ಎನ್ನುತ್ತಾರೆ. ನಿಮ್ಮ ಮಾವನವರ ಅಣ್ಣ ತಮ್ಮಂದಿರು ಎಷ್ಟು ಜನ ಎಂದರೆ 3 ಜನ ಎನ್ನುತ್ತಾರೆ. ದಾವಾ ಆಸ್ತಿ ಬಿಟ್ಟು ನಿಮ್ಮ ಮಾವನಿಗೆ ಎಷ್ಟು ಆಸ್ತಿ ಇರುತ್ತದೆ ಎಂದರೆ ನನ್ನ ಯಜಮಾನನರಿಗೆ ಗೊತ್ತು ಎನ್ನುತ್ತಾರೆ. ದಾವಾ ಆಸ್ತಿ ನಿಮ್ಮ ಮಾವನವರಿಗೆ ವಿಭಾಗದ ಪತ್ರದ ಮುಖಾಂತರ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇ-ಸ್ವತ್ತು ಇರುವ ಮೊದಲು ಯಾವ ನಂಬರ್ ಇತ್ತು ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾಖಲಾತಿ ನಿಮಗೆ ಗೊತ್ತಿಲ್ಲವಾ ಎಂದರೆ ನಮ್ಮ ಅತ್ತೆ ಬರುತ್ತಿದ್ದರು ನನ್ನ ಗಂಡ ತೀರಿಕೊಂಡಿರುತ್ತಾರೆ ನಾನು ಈಗ ಬಂದಿರುತ್ತೆನೆ. ನಿಮ್ಮ ಅತ್ತೆ ಬದುಕಿದ್ದಾರಾ ಎಂದರೆ ಬದುಕಿದ್ದಾರೆ ಎನ್ನುತ್ತಾರೆ. ಇ ಸ್ವತ್ತು ಆಗುವದಕ್ಕಿದಂತ ಮೂದಲು ಆನುಸ್ಮಾರಿ ನಂಬರ ಇತ್ತು ಎಂದರೆ ಗೊತ್ತಿಲ್ಲ. ಪೂರ್ವ-ಪಶಿಮ 50 ಅಡಿ ಉತ್ತರ-ದಕ್ಷಿಣ 60 ಅಡಿ ಎಂದರೆ ಸಾಕ್ಷಿ ಉತ್ತರ ದಕ್ಷಿಣ 90 ಅಡಿ ಎನ್ನುತ್ತಾರೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿ

ಉತ್ತರಕ್ಕೆ ಸಂದು ಈರಮ್ಮನ ಮನೆ , ದಕ್ಷಿಣಕ್ಕೆ ನಮ್ಮ ಖಾಲಿ ಜಾಗ ಹಾಗೂ ನಾರಾಯಣಮ್ಮ ಮನೆ ಹಾಗೂ ನರಸಿಂಹಮೂರ್ತಿ ಮನೆ. ಪೂರ್ವಕ್ಕೆ ರಾಜಬೀದಿ ಇರುತ್ತದೆ. ಪಶ್ಚಿಮಕ್ಕೆ ಯಾರು ಇರುತ್ತಾರೆ ಎಂದರೆ ನನ್ನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮನೆ ಪಶ್ಚಿಮಕ್ಕೆ ಚಾಂದಪಾಷಾ ರವರ ಹೊಲ ಮತ್ತು ಜಾಗ ಇರುತ್ತದೆ ಎಂದರೆ ಅವರು ನಮ್ಮ ಪಕ್ಕದಲ್ಲಿ ಇಲ್ಲವೇ ಇಲ್ಲ ಎನ್ನುತ್ತಾರೆ. ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ ಅದು ಯಾರದು ಎಂದು ನಮಗೆ ಗೊತ್ತಿಲ್ಲ. ನಿಮ್ಮ ಮಾನವನವರಿಗೆ ವಿಭಾಗ ಪತ್ರದ ಮುಖಾಂತರ ಬಂದಿರುವ ಜಾಗ ಪೂರ್ವ-ಪಶ್ಚಿಮ **50** ಅಡಿ ಉತ್ತರ-ದಕ್ಷಿಣ **60** ಅಡಿ ಎಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಎನ್ನುತ್ತಾರೆ. ಪಶ್ಚಿಮ ದಿಕ್ಕಿನಲ್ಲಿ ಖಾಲಿ ಜಾಗ ಇರುತ್ತದೆ ನಂತರ ನಮ್ಮ ಜಮೀನು ಇರುತ್ತದೆ. ಸದರಿ ಜಮೀನು ಪೂರ್ವ ದಿಕ್ಕಿಗೆ ಚಾಂದ ಪಾಷಾ ರವರ ಮನೆ ಇರುತ್ತದೆ ಎಂದರೆ ಸಾಕ್ಷಿ ನಮ್ಮ ಚಕ್ಕುಬಂದಿಯಲ್ಲಿ ಅವರು ಇಲ್ಲ ಎನ್ನುತ್ತಾರೆ. ನಿಮ್ಮ ಇ-ಸ್ವತ್ತಿನ ಪೂರ್ವಕ್ಕೆ ಸಿ.ಸಿ. ರಸ್ತೆ ಎಂದರೆ ಹೌದು ಎನ್ನುತ್ತಾರೆ. ಯಾವ ಆಧಿಾರದ ಮೆಲೆ ಇ-ಸ್ವತ್ತು ಮಾಡಿರುತ್ತೀರಾ ಎಂದರೆ ನಮ್ಮ ಅತ್ತೆ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ಪಂಚಾಯಿತಿಯಿಂದ ಮಂಜೂರಾತಿ ಪತ್ರ ಕೊಟ್ಟಿರುತಾರಾ ಎಂದರೆ ಪಂಚಾಯಿತಿಯಿಂದಲೇ ಮಾಡಿರುತ್ತೆವೆ ಎನ್ನುತ್ತಾರೆ. ಪಂಚಾಯಿತಿಯವರು ಮಂಜೂರಾತಿ ಪತ್ರ ಕೊಟ್ಟಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ ನೀವು ಕೊಟ್ಟಿರುವ ಇ-ಸ್ವತ್ತಿನ ದಕ್ಷಿಣ ದಿಕ್ಕಿಗೆ ಎಷ್ಟು ಜಾಗ ಆದ ನಂತರ ನರನಸಿಂನಹಮೂರ್ತಿ ಜಾಗ ಇರುತ್ತದೆ ಎಂದರೆ ನಮ್ಮ ಕಾಂಪೌಂಡ್ ಪಕ್ಕದಲ್ಲೆ ಒಂದು ಸಂದು ಇರುತ್ತದೆ ನಂತರ ನರಸಿಂಹಜಮಾರ್ತಿ ಇರುತ್ತಾರೆ. ಸದರಿ ಸಂದು ರಂಗೇನಹಳ್ಳಿ, ಯರಮಲರೆಡ್ಡಿ ಊರಿಗೆ ಹೋಗುವ ದಾರಿ ಇರುತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ಎಷ್ಟು ಅಡಿಗಳು ಆದ ನಂತರ ನರಸಿಂಹಮೂರ್ತಿ ಆಸ್ತಿ ಇರುತ್ತದೆ ಎಂದರೆ ಅಡಿ ಲೆಕ್ಕ ಗೊತ್ತಿಲ್ಲ ಎನುತ್ತಾರೆ.

ಸಾಕ್ಷಿ ಮುಂದಮರೆದು **3** ಅಡಿ ಸಂದು ಜಾಗ ಇರುತ್ತದೆ ಎನ್ನುತ್ತಾರೆ. ನಿಮ್ಮ ಸ.ನಂ. **185** ಜಾಗ ಚಾಂದ ಪಾಷಾ ರವರು ಮಾಡಿರುತ್ತಾರಾ ಎಂದರೆ ಅವರು ಕುಟುಂಬಂದವರು ಮಾಡಿರುತ್ತಾರೆ ಎನ್ನುತ್ತಾರೆ. ನೀವು ಚಾಂದ ಪಾಷಾರವರು ಪ್ರತಿವಾದಿ **3** ಮತ್ತು **4** ಬೇರೆಯವರೆಲ್ಲರೂ ಆ ಸಂದು ಜಾಗದಲ್ಲಿ ಓಡಾಡುತ್ತಿರುವುದು ಎಂದರೆ ಸುಳ್ಳು ಎನ್ನುತ್ತಾರೆ. ಇ-ಸ್ವತ್ತಿಗೆ ಸಂಬಂಧಿಸಿದಂತೆ ರಿಜುಲೇಷನ್ ಆಗಿರುತ್ತದೆ ಎಂದರೆ ಅದು ಏನು ಅಂತ ನನಗೆ ಸರಿಯಾಗಿ ಗೊತ್ತಿಲ್ಲ. ನಿಮ್ಮ ಮಾವನವರ ಸ್ವತ್ತು ಪೂರ್ವ-ಪಶಿಮ **50** ಅಡಿ, ಉತ್ತರ ದಕ್ಷಿಣ **60** ಅಡಿಗಳಷ್ಟು ಮಾತ್ರ ನಿಮ್ಮ ಪ್ರಭಾವ ತೋರಿಸಿ ದಾಖಲಾತಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನರಸಿಂಹಮೂರ್ತಿ ಅವರ ಜಾಗ ಎಷ್ಟು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಆಸ್ತಿ ಪಶ್ಚಿಮ ದಿಕ್ಕಿಗೆ ಚಾಂದ ಪಾಷಾರವರು ಇರುತ್ತಾರೆ ಎಂದರೆ ಇತ್ತಿಚೆಗೆ ಕಟ್ಟ ಕೊಂಡಿರುಎತ್ತಾರೆ ಎನ್ನುತ್ತಾರೆ, ಸದರಿ ಚಾಂದ ಪಾಷಾ ರವರು ಶೆಡ್ ಕಟ್ಟಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಂದ ಪಾಷಾ ರವರು **12** ಅಡಿ ಜಾಗ ಬಿಟ್ಟು ಕೊಂಡಿರುತ್ತಾರೆ ಎಂದರೆ ಸುಳುವ್ಳ ಎನ್ನುತ್ತಾರೆ. ದಾರಿ ಆದ ನಂತರ ನರಸಿಂಹಮೂರ್ತಿ ಆಸ್ತಿ ಇರುತ್ತದೆ ಎಂದರೆ ಅಲ್ಲಿ ದಾರಿ ಇಲ್ಲ ಎನ್ನುತ್ತಾರೆ. ಚಾಂದ ಪಾಷಾ ರವರು ಅದೇ ಜಾಗದಲ್ಲಿ ಉಪಯೊೀಗಿಸುವ ಸಲಕರೆಣೆ ತೆಗೆದುಕೊಂಡು ಹೋಗುತ್ತಾರೆ ಎಂದರೆ ಯಾವುದೇ ಜಾಗ ಇಲ್ಲ ಎನುನತ್ತಾರೆ. ಅಲ್ಲಿ ಸದರಿ ಜಾಗದಲ್ಲಿ ನೀವು ಸುಳ್ಳು ಪತ್ರ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದಮರೆದು ನನ್ನ ಗಂಡ ಇದ್ದಾಗಲೇ ಕಾಂಪೌಂಡ್ ಹಾಕಿಕೊಂಡಿರುತ್ತೆವೆ ಎನ್ನುತ್ತಾರೆ. ಚಾಂದ ಪಾಷಾ ರವರು ಸ.ನಂ. ನಲ್ಲಿ ಕಟಿಟರುತ್ತಾರಾ ಅಥವಾ ಸೈಟ್ ನಲ್ಳಿ ಮನೆ ಕಟ್ಟಿ

ಕೊಂಡಿರುತ್ತಾರಾ ಎಂದರೆ ಸೈಟ್ ನಲ್ಲಿ ಕಟ್ಟಿಕೊಂಡಿರುತ್ತಾರೆ. ಸ.ನಂ. ಪಕ್ಕದಲ್ಲಿ ಸೈಟ್ ಎಂದರೆ ಸಾಕ್ಷಿ ಊರಿನಲ್ಲಿ ಜಮೀನುನ್ನು ಮಾರಿಕೊಂಡು ಹೊಲದಲ್ಲಿ ಕಟ್ಟಿಕೊಂಡಿರುತ್ತಾರೆ. ಮನೆಯ ಪಶ್ಚಿಮ ದಿಕ್ಕಿಗೆ ಚಾಂದ ಪಾಷಾ ರವರ ಸೈಟ್ ಇರುತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಸಂದು 12 ಅಡಿ ರಸ್ತೆ ಇರುತ್ತದೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.